International Journal of Kannada Research 2018; 4(4): 126-128

International Journal of Kannada Research
www.kannadajournal.com

ISSN: 2454–5813
IJKR 2018; 4(4): 124-125
© 2018 IJKR
www.kannadajournal.com
Received: 22-08-2018
Accepted: 24-09-2018

**ಕವಿತಾ ಸಿ.ಡಿ**
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ.ಕನ್ನಡ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ

**Correspondence**
**ಕವಿತಾ ಸಿ.ಡಿ**
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ.ಕನ್ನಡ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ

# ಹರಿಹರನ ರಗಳೆಗಳಲ್ಲಿ 'ಶಿವ' ಪರಿಕಲ್ಪನೆ

**ಕವಿತಾ ಸಿ.ಡಿ**

ಹರಿಹರನ ರಗಳೆಗಳ ಉದ್ದೇಶ ಶರಣರ ಭಕ್ತಿಯನ್ನು ತಿಳಿಸುವುದರ ಜೊತೆಗೆ ಶಿವನ ಕಾರುಣ್ಯವನ್ನೂ ಅವನ ಮಹಿಮೆಯನ್ನು ಸಾರುವುದು. ಶಿವನ ಸರ್ವಶ್ರೇಷ್ಠತೆಯನ್ನು ಸ್ಥಾಪಿಸುವುದು. "ಮಾನವ ನೀನಹರ್ನಿಶಂ ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ"(ತಾಳ್ತಜೆ ವಸಂತ ಕುಮಾರ,1980,ಪುಟ 13) ಎನ್ನುವ ಉದಾತ್ತ ಆಶಯ ಕಾವ್ಯೋದ್ದೇಶದ ಸಾಫಲ್ಯಕ್ಕೆ ಕಾರಣವಾಗುತ್ತದೆ. ಇದಕ್ಕೆ ನಿಮಿತ್ತಮಾತ್ರವಾಗಿರುವ ಪಾತ್ರಗಳ ಹಿನ್ನಲೆಯಲ್ಲಿ ಶಿವನ ಅಸ್ತಿತ್ವ ಸದಾ ಇದ್ದೇ ಇರುತ್ತದೆ. ತನ್ನ ಭಕ್ತರನ್ನು ಪರೀಕ್ಷಿಸಲು ಶಿವ ಕೈಗೊಳ್ಳುವ ಉಪಾಯಗಳು ವೈವಿಧ್ಯಪೂರ್ಣವಾಗಿವೆ. ಪಾತ್ರಗಳ ಚಲನವಲನಗಳ ನಿಯಂತ್ರಣಾಧಿಕಾರಿ ಶಿವನೇ ಆಗಿದ್ದಾನೆ. ಭಕ್ತರಾದವರೂ ಶಿವನ ಪ್ರತಿರೂಪಗಳೇ ಆಗಿರುವುದರಿಂದ ಇಲ್ಲಿ ಘರ್ಷಣೆ ಇಲ್ಲ. ಶಿವ ಸೋತರೂ ಗೆಲ್ಲುತ್ತಾನೆ. ಭಕ್ತರ ಗೆಲುವು ಶಿವನ ಗೆಲುವಾಗುತ್ತದೆ. ಭಕ್ತನ ಭಕ್ತಿಗೆ ಪ್ರಕಾಶನಕ್ಕೆ ಬರಬೇಕಾದರೆ ಶಿವನ ಹಸ್ತಕ್ಷೇಪ ಅನಿವಾರ್ಯ. ಹರಿಹರ ತನ್ನೆಲ್ಲ ಪಾತ್ರಗಳ ಭಕ್ತನ ಮುಖವನ್ನು ಮಾತ್ರ ವಿಶ್ಲೇಷಿಸುವುದರಿಂದ ಎಲ್ಲ ರಗಳೆಗಳ ಸೂತ್ರಧಾರನಾಗಿ ಶಿವನೇ ಇರುತ್ತಾನೆ.(ಡಾ.ಸಂಗಮೇಶ ಸವದತ್ತಿ,2000,ಪುಟ 304).

## ಶಿವ ಪದದ ಅರ್ಥ ನಿಷ್ಪತ್ತಿ

ಶಿವ ಎನ್ನುವ ಪದಕ್ಕೆ ಅರ್ಥ ಶುಭಮಂಗಳ ಕಲ್ಯಾಣಕಾರಕ, ಆನಂದದಾಯಕ, ಮೋಕ್ಷಪ್ರದಾಯಕ ಎಂಬಿತ್ಯಾದಿ ಅರ್ಥಗಳಿವೆ. ಶಿವ ಎಂಬುದಕ್ಕೆ ನಿರುಕ್ತದ ದೈವತಾಕಾಂಡದಲ್ಲಿ ಸುಖ, ಆನಂದ, ರುದ್ರ, ಪಶುಪತಿ, ವಿಷಕಂಠ, ಶಂಕರ, ಅರ್ಧನಾರೀಶ್ವರ(ಡಾ.ಸಂಗಮೇಶ ಸವದತ್ತಿ,1999,ಪುಟ 306).

ಶಿವ, ರುದ್ರ, ವೀರಭದ್ರರು ದ್ರಾವಿಡರೆಲ್ಲರಿಗೂ ಆರಾಧ್ಯ ದೈವವಾದರು. ಇದರಿಂದ ಶಿಷ್ಟರು, ಪರಿಶಿಷ್ಟರು, ಮೇಲ್ವರ್ಗದವರು, ಕೆಳವರ್ಗದವರು ಎಲ್ಲರೂ ಶಿವಭಕ್ತರಾದರು. ಪ್ರಾಚೀನ ಕಾಲದ ಅಗಸ್ತ್ಯಾದಿ ಋಷಿಮುನಿಗಳು, ರಾವಣಾದಿ ದ್ರಾವಿಡರು, ರೇಣುಕ ಶಂಕರಾಚರ್ಯರಂಥ ಆಚಾರ್ಯರು. ಬೇಡರ ಕಣ್ಣಪ್ಪ, ಮಾದರಚೆನ್ನಯ್ಯನಂಥ ದಲಿತರು 63 ಪುರಾತನರು, ಚೋಳನಂಥ ಅರಸರು, ಬಸವಾದಿ ಶಿವಶರಣರು ಇಂಥ ಬಹುವರ್ಗೀಯ ಜನರ ಪೂಜನೀಯ ದೈವವಾದ ಈ ಶಿವ(ಡಾ.ಸಂಗಮೇಶ ಸವದತ್ತಿ,1999,ಪುಟ305).

ತಿರುನೀಲಕಂಠ ರಗಳೆಯಲ್ಲಿ ಶಿವನ ಮೇಲೆ ಆಣೆಯೂ ಮುಖ್ಯವಾಗಿದೆ. "ಮುಟ್ಟಿದೊಡೆ ಶಿವನಾಣೆ" ಎಂಬುದನ್ನು 'ಆಣೆ ಪತ್ರಕ್ಕೆ ಬಂದಂತೆ' ತೊಂಬತ್ತರ ಮುಪ್ಪು ಅಡಸುವವರೆಗೂ ನಿಷ್ಠೆಯಿಂದ ಪಾಲಿಸಿದ ಭಕ್ತರನ್ನು ಪರೀಕ್ಷಿಸಲು ಶಿವ ಧರೆಗಿಳಿಯುತ್ತಾನೆ. ಪಾತ್ರೆಯನ್ನು ಜೋಪಾನವಾಗಿ ಇಟ್ಟುಕೊಳ್ಳಲು ತಿರುನೀಲಕಂಠನಿಗೆ ನೀಡುತ್ತಾನೆ. ಅದು ಮಾಯವಾದಾಗ ತನ್ನ ಭಕ್ತರನ್ನು ದಣಿಸಿ ಶಿಕ್ಷಿಸುತ್ತಾನೆ. ಕೇವಲ ಪತ್ನಿಯ ಕೈಹಿಡಿದು ದೇವಾಲಯದ ಕೊಳದಲ್ಲಿ ಮುಳುಗಿದರೆ ಸಾಕೆಂದು ಸರಳ ಶರತ್ತನ್ನು ಹಾಕುತ್ತಾನೆ. ಒಂದೆಡೆ ತನ್ನ ನಡುಬಾಳಿನ ಕೊನೆಗಾಲದಲ್ಲಿ ಬಂದಿರುವ ಅಪವಾದ, ಇನ್ನೊಂದೆಡೆ ಶಿವನ ಭಾಷೆ. ಇಲ್ಲಿ ಭಕ್ತಿಯೇ ಜಯಿಸುತ್ತದೆ. ಶಿವ ಆಣೆಯೂ ಮಹತ್ತ್ವ ಪೂರ್ಣವಾಗುತ್ತದೆ. ಇಲ್ಲಿ ಶಿವ ಕೆರಳಿಸುವಂತೆ ತೆಗಳುತ್ತಾನೆ, ದಂಡಿಸುತ್ತಾನೆ. ಕೊನೆಗೆ ಅವರ 'ನಿಜವನರಿತು' ಕರುಣಿಸುತ್ತಾನೆ

ನಂಬಿಯಣ್ಣನ ರಗಳೆಯಲ್ಲಿ ಶಿವನ ಅಪಾರವಾದ ನಂಬಿಕೆಯಾಗಿದೆ. ಅವನ ಎಲ್ಲಾ ಕಾರ್ಯಗಳಲ್ಲಿ ಅವನಿಗೆ ಶಿವನ ಸಹಕಾರವೇ ಬೇಕು. ಪ್ರೇಯಸಿಯಾದ ಪರವೆ ಕೋಪಿಸಿಕೊಂಡರೆ ಶಿವ ಸಮಾಧಾನಿಸಬೇಕು, ಸಂಕಲಿಯನ್ನು ವಿವಾಹವಾಗಬೇಕೆನಿಸಿದರೆ ಶಿವನ ಮಧ್ಯಸ್ಥಿಕೆನೂ ವಹಿಸುತ್ತಾನೆ. ನಂಬಿಯಿಂದ 'ಪಿಚ್ಚ' ನೆಂದು ಕರೆಸಿಕೊಳ್ಳುತ್ತಾನೆ. 'ತೊತ್ತು' ಇಲ್ಲಿ ನಂಬಿಗೆ ಶಿವನಾಗಿದ್ದಾನೋ, ಶಿವನೋ ನಂಬಿಯಾಗಿದ್ದನೋ ತಿಳಿಯಲು ಓದುಗನಿಗೆ ಯೋಚನೆಗೆ ಬಿಡುತ್ತದೆ.

ಬಸವರಾಜದೇವರ ರಗಳೆಯಲ್ಲಿ ಕೈಲಾಸದಲ್ಲಿ ವೃಷಭಮುಖನಿರುತ್ತಾನೆ. ಶಿವನಿಂದ ಆಜಪ್ತವಾಗಿ, ಅವನ ಪ್ರಸಾದವನ್ನು ಶಿವಗಣಗಳಿಗೆ ಹಂಚುತ್ತಿರುವಾಗ ಆಚಾತುರ್ಯದಿಂದ ಕುಮಾರಸ್ವಾಮಿಯನ್ನು ಮರೆತುಬಿಡುತ್ತಾನೆ. ಪ್ರಸಾದವನ್ನು ಕೊಟ್ಟಿರುವುದಾಗಿ ವಾದ ಮಾಡುತ್ತಾನೆ. ಇದರಿಂದ ಕುಪಿತಗೊಂಡ ಶಿವ 'ಹುಸಿನುಡಿವರೇ ಕುಡದೆ ಎನ್ನಯ ಕುಮಾರಂಗೆ----ವಿಮಳ ಶಿಶುವಿಂಗೆ ಹುಸಿನಿಡಿಯೇ ಸೈರಿಸೆವಯ್ಯ" ಎಂದು. ಭೂಲೋಕದಲ್ಲಿ ಜನ್ಮವೆತ್ತಿ ದಾನ ಧರ್ಮಗಳಿಂದ ಶುದ್ಧೀಕರಣ ಹೊಂದಿ ಮರಳಿ ತನ್ನ ಬಳಿಗೆ ಬರುವಂತೆ ವೃಷಭಮುಖನಿಗೆ ಆಜ್ಞಾಪಿಸುತ್ತಾನೆ. ಕೈಲಾಸದಲ್ಲಿ ಮೈಯೆಲ್ಲಾ ಕಣ್ಣಾಗಿರುವ ವರ್ತನ ಅನಿವಾರ್ಯವಾಗುತ್ತದೆ. ಆ ಎತ್ತರವನ್ನು, ಶಿವನ ಸಾನ್ನಿಧ್ಯದ ಸುಖವನ್ನು ಅನುಭವಿಸಬೇಕಾದರೆ ಇಂಥ ನಿಷ್ಠೆ ಬೇಕೇ ಬೇಕಾಗುತ್ತದೆ. ಈ ಭಕ್ತನ ವಿಷಾದಯೋಗದ ಹಿಂದಿರುವುದು ಭೂಲೀಕದ ಜನರನ್ನು ಎಚ್ಚರಿಸಿ, ಅವರನ್ನು ಸನ್ಮಾರ್ಗ ಪ್ರವರ್ತಕರಾಗುವಂತೆ ಮಾಡಬೇಕೆನ್ನುವ ಶಿವನ ಸತ್ಯ ಸಂಕಲ್ಪ.

ಮಾರುಡಿಗೆಯ ನಾಚಿತಂದೆಯ ರಗಳೆಯಲ್ಲಿ ಶಿವನು ಕನಸಿನಲ್ಲಿ ಬಂದು "ಎನ್ನಣುಗು ನಾಚಯ್ಯ, ನನ್ನ ಭಕ್ತನೊಬ್ಬನನ್ನು ಮಾರುಡಿಗೆಯ ಜೈನರು ಸದೆಬಡಿದರು, 'ಭಕ್ತಕಾಯ ಮಮಕಾಯ' ಎಂಬ ಬಿರುದು ನನಗಿಲ್ಲವೆ? ಆದ್ದರಿಂದ ಭಕ್ತನಿಗೆ ಬಿದ್ದ ಪೆಟ್ಟು ನನಗೆ ಬಿದ್ದಂತೆಯೆ ಸರಿ. ಮೈಮೇಲೆ ಎದ್ದಿರುವ ಬಾಸುಳಗಳನ್ನು ನೋಡು, ನೋಡಿಯೂ ಸುಮ್ಮನಿರುವುದೆ ನಾಚಯ್ಯ? ಏಳಯ್ಯ, ವೀರಭಕ್ತಿಯ ವೀರನಾಚಯ್ಯ, ಬಾಳಯ್ಯ ಭಕ್ತಿರಸನಿಧಿಯೊಳಗೆ ನಾಚಯ್ಯ".

ಅಮರನೀತಿಯ ರಗಳೆ ಅಗರ್ಭ ಶ್ರೀಯುತನ ಅಹಂಕಾರವನ್ನು ಪರೀಕ್ಷಿಸಲು ಶಿವನು ಒಡ್ಡುವ ಪರೀಕ್ಷೆಯಾಗಿದೆ. ಅಮರನೀತಿಗೆ ವೃದ್ಧವೇಷದ ಶಿವನು ಕೌಪಿನವನ್ನು ನೀಡಿ, ಮತ್ತೆ ಬರುವವರೆಗೆ ಜೋಪಾನವಾಗಿಡಲು ತಿಳಿಸಿ ಹೋಗುತ್ತಾನೆ. ಬರುವಷ್ಟರಲ್ಲಿ ಕೌಪಿನ ಮಾಯವಾಗಿರುತ್ತದೆ. ಕೌಪಿನಕ್ಕೆ ಸಮಾನಾದ ವಸ್ತ್ರವನ್ನು ನೀಡುವುದಾಗಿ ಹೇಳಿದಾಗ ಶಿವನು ಒಪ್ಪುವುದಿಲ್ಲ. ತಕ್ಕಡಿಯಲ್ಲಿ ಒಂದು ಕಡೆ ಕೌಪಿನ ಇನ್ನೊಂದು ಕಡೆ ವಸ್ತ್ರಗಳನ್ನು ಇಡುತ್ತಾ ಹೋಗುತ್ತಾನೆ. ತನ್ನಲ್ಲಿರುವ ಎಲ್ಲ ವಸ್ತ್ರಗಳನ್ನು ಇಟ್ಟರೂ ತೂಕಕ್ಕೆ ಸಮನಾಗುವುದಿಲ್ಲ. ಆಗ ಅಮರನೀತಿ ತನ್ನ ಹೆಂಡತಿ ಮತ್ತು ಮಗನನ್ನು, ತನ್ನನ್ನು ತಕ್ಕಡಿಯಲ್ಲಿ ತೂಗಿಸಿಕೊಳ್ಳುವುದು. ಶಿವನಿಗೆ ತನ್ನನ್ನು ಅರ್ಪಿಸುತ್ತಾನೆ. " ಈಶ ಕಾರುಣ್ಯವನ್ನು ಪಡೆಯ ಬಯಸುವವನು ತನ್ನಲ್ಲಿರುವ ಧನ, ಕನಕ, ವಸ್ತ್ರಗಳನ್ನು ಕೊಟ್ಟರೆ ಸಾಲದು, ಪತ್ನಿ ಪುತ್ರರನ್ನು ಕೊಟ್ಟರೂ ಸಾಲದು, ತನ್ನನ್ನೂ ತನ್ನ ಬುದ್ಧಿ, ಮನ, ಚಿತ್ತ, ಅಹಂಕಾರಗಳನ್ನು ಶಿವನಿಗರ್ಪಿಸಿ ತಾನು ಇಲ್ಲವಾಗಬೇಕು" ಎಂಬುದು ಭಕ್ತಿ ತತ್ವದ ತಿರುಳುಗಳೇ ಕಥೆಗಳಿವೆ.

ಕಣ್ಣಪ್ಪನ ರಗಳೆಯಲ್ಲಿ ಒಂದು ದಿನ ಮಾಯಾಮೃಗ ತೋರಿ ಅದನ್ನು ಕರೆದುಕೊಂಡು ಬಾ ಎಂದು ಶಿವ ಹೇಳಿದ. ಆ ಮಾಯಾಮೃಗ ಬೆಟ್ಟದ ಮೇಲಕ್ಕೆ ಕರೆತಂದು ಶಿವಾಲಯದ ಮುಂದೆ ಮಾಯವಾಗುತ್ತದೆ. ಕಣ್ಣಪ್ಪ ಮತ್ತು ಶಿವನ ನಡುವೆ ಮಧುರ ಬಾಂದವ್ಯವೂ ಮೂಡುತ್ತದೆ. ಅದು ವ್ಯವಹಾರದ ರೂಪವಾಗಿರುತ್ತದೆ. ದಿನದಲ್ಲಿ ಬಂದ ಭೇಟೆಯಲ್ಲಿ ಅರ್ಧ ನನಿಗೆ, ಅರ್ಧ ನಿನಗೆ ಎನ್ನುತ್ತಾನೆ. ಅವನ ಭಕ್ತಿಯನ್ನು ಗೌರಿಯ ಹತ್ತಿರ ಶಿವ ಹೇಳುವುದು. 'ಬ್ರಾಹ್ಮಣನ ನೀರು ತಿಳಿ, ಮನ ಕದಡು, ಪೂಜೆ ಇನಿದು, ಮನ ವಿಷ, ಮಂತ್ರ ಕ್ಷುದ್ರ ತಂತ್ರ'ಎಂದೂ ಹೇಳುತ್ತಾ. 'ಸತ್ಯವಲ್ಲದೆ ಪೂಜೆ ಆಪ್ತ ಗಣವೃಂದಕ್ಕೆ ಸೇರಿಸಿಕೊಳ್ಳುತ್ತಾನೆ.

ಇಳೆಯಾಂಡ ಗುಡಿಮಾರ 'ಶಿವನ ಕುಡಿ' ಬೇಸಾಯಗಾರನಾಗಿದ್ದ. ದಾನಧರ್ಮಗಳಿಂದ ಕೈ ಬರಿದಾಯಿತು. ಭೂಮಿ ಮಾರಾಟವಾಯಿತು. ಆದರೂ ಅವನ ನಿಷ್ಠೆಗೆ ಭಂಗ ಉಂಟಾಗಲಿಲ್ಲ. ಇಂತಹ ಸಧಿಗ್ಧ ಕಾಲದಲ್ಲಿ ಶಿವನಿಗೆ ಅವನ ಪರೀಕ್ಷೆಯ ಬಯಕೆ. ಕಂದ ಸತ್ತರೂ ತಮ್ಮ ನೇಮ ವೇಷ ಬಹಳ ಹೊತ್ತು ಬಾಳಲಿಲ್ಲ "ಪುರಹರಂ ವೃದ್ಧ ವೇಷವನಿಳಿಪ" ಬೆಳಗಿದನು.

ರುದ್ರಪಶುಪತಿ ರಗಳೆಯಲ್ಲಿ ಶಿವನನ್ನು ವಿಷಮುಕ್ತಗೊಳಿಸಲು ಸಮುದ್ರದ ದಡಕ್ಕೆ ಬಂದು ಕಂಠದವರೆಗೂ ಸಮುದ್ರದಲ್ಲಿ ಮುಳುಗಿ ಪಂಚಾಕ್ಷರಿ ಮಂತ್ರ ಜಪಿಸತೊಡಗಿದ. ಹೀಗೆ ಧ್ಯಾನಾಸಕ್ತನಾಗಿರಲು ಜಲಚರಗಳು ಅವನ ದೇಹದ ಮಾಂಸವನ್ನೆಲ್ಲ ತಿಂದು ಎಲುಬಿನ ಹಂದರವನ್ನು ಮಾತ್ರ ಉಳಿಸುತ್ತವೆ. ಆದರೂ ಅವನ ನಿಷ್ಠೆ ಕಡಿಮೆಯಾಗಲಿಲ್ಲ, ಭಕ್ತನನ್ನು ಪರೀಕ್ಷಿಸಲೆಂದು ಬಂದ ಶಿವ 'ನಿನೇಕೆ ವಿಷವೇಕೆ ಬಿಡಿಸುವಾಯಸವೇಕೆ' ಎಂದು ಕಟಕಿ ಮಾತುಗಳನ್ನಾಡುತ್ತಾನೆ. ಶಿವನಿಂದೆಯನ್ನು ಕೇಳಿದ ರುದ್ರಪಶುಪತಿ ಕೋಪದಿಂದ ಶಿವನಿಗೆ 'ಎಲೆಲೆ ಶಿವನಿಂದಕನೆ ಅಡಗಡಗೆಂಬು' 'ಜಲವನಭಿಮಂತ್ರಿಸಿ' ಚಿಮುಕಿಸುತ್ತಾನೆ. ಭಕ್ತನ ಭಕ್ತಿಗೆ ಮೆಚ್ಚಿ ಶಿವ ತನ್ನ ನಿಜರೂಪ ತೋರುತ್ತಾನೆ (ಡಾ.ಕೆ.ಪಿ.ಮಹಾದೇವಯ್ಯ, 1999,ಪುಟ-9).

ಕೋಳೂರ ಕೊಡಗೂಸು ಮುಗ್ಧ ಭಕ್ತಿಯಿಂದಾಗಿ ಶಿವನಿಗೆ ಹಾಲುಣಿಸುವಂತಹ ಕಥೆಯನ್ನು ಕವಿ ಇಲ್ಲಿ ಚಿತ್ರಿಸುತ್ತಾನೆ. ತಾಯಿ ಹೇಳಿದ ಶಿವನ ರೂಪವನ್ನು ನಂಬುತ್ತಾಳೆ. ಮಗಳೆ " ಏನಪ್ಪ ನಲವಿಂ ಕಲ್ಲಿನಾಥಂಗೆ----ಹಾಲನೆರೆ ಹೋಗವ್ವ ಸದ್ಗುಣ ನಿಕಾಯಂಗೆ" ಎನ್ನಲು, ಏನೂ ಅರಿಯದ ಕೊಡಗೂಸು ಹಾಲಿನ ಬಟ್ಟಲು ಹಿಡಿದು ಶಿವಾಲಯಕ್ಕೆ ಬಂದು, ಶಿವನನ್ನು ಹಾಲು ಕುಡಿಯುವಂತೆ ಬೇಡಿಕೊಳ್ಳುತ್ತಾಳೆ ಶಿವ ಪ್ರತ್ಯಕ್ಷನಾಗಿ ಹಾಲು ಕುಡಿಯುತ್ತಾನೆ(ಡಾ.ಎಸ್.ವಿದ್ಯಾಶಂಕರ,2013,ಪುಟ-184).

ಒಹಿಲಯ್ಯನ ಉಗ್ರ ಭಕ್ತಿಯಲ್ಲಿ ಶಿವ ಮಹಿಮೆಯನ್ನು ತಿಳಿಯಬಹುದು. "ಬಲವಳಿದು ಡೆಂಡಣಿಸಿ ಹೆಜ್ಜೆ ಹುಣ್ಣಂತಾಗಿ 'ಲಿಂಗಾಲೊಳುರಿಗೆಳ್ದ ಬೊಕ್ಕೆ ನೆತ್ತರನುಗುಳೆ' ಅಂಗದೊಳಗುಳ್ಳ ಸರ್ವತ್ರಾಣಮುಂ ಜಗುಳೆ" ಅವಯವಗಳು ಸಡಿಲವಾಗುತ್ತದೆ. ಆದರೂ ಹಿಡಿದ ನೇಮವನ್ನು ಬಿಡದೆ ಪಾಲಿಸುತ್ತಾ ಬಂದ ಕಷ್ಟಗಳನೆಲ್ಲ ಸಹಿಸುತ್ತಾನೆ. ಹನ್ನೆರಡು ವರ್ಷಗಳ ವ್ರತಾಚರಣೆಯಲ್ಲಿ ಕಳೆಯುತ್ತಿದ್ದಂತೆ, ಶಿವನಿಗೆ ಮತ್ತೆ ಹನ್ನೆರಡು ವರ್ಷಗಳ ಕಾಲ ಒಹಿಲಯ್ಯ ನೀಡುವ ಪ್ರಸಾದವನ್ನು ಸವಿಯಬೇಕೆನಿಸುತ್ತದೆ.

ಮೆಚಿಮಿಂಡದೇವರು ಸದಾಶಿವನೊಲಿದು ನೆಲೆಸಿರುವ ಚೋಳದೇಶಕ್ಕೆ ಆಭರಣಪ್ರಾಯವಾದ ತಿರುವಾರೂರೆಂಬ ಹಿರಿಮೆಯ ಪುರವು ಬೇರೊಂದು ಕೈಲಾಸದಂತೆ ಶೋಭಿಸಿರುವುದೆಂದೂ ಅಲ್ಲ, ಶಿವನ ಅಪ್ರತಿಮ ಶಿವಭಕ್ತನ ಮೆರಮಿಂಡದೇವನಿರುವನೆಂದೂ ಆತ ಶಿವನನಲ್ಲದೆ ಯಾರನ್ನೂ ಲೆಕ್ಕಿಸದ ಕಡುಮಾನಿಯೆಂದೂ ಹೇಳಲಾಗಿದೆ (ಡಾ.ಕೆ.ಪಿ.ಮಹಾದೇವಯ್ಯ, 1999,ಪುಟ-10).

ಶಿವಭಕ್ತರ ಮನಸ್ಸಿನ ತೊಳಲಾಟ ನಮಗೆ ತಂದೆತಾಯಿ ಶಿವನಲ್ಲದಿಲ್ಲ. ನಮಗೆ ಕಣ್ಣೂಗತಿಯು ಶಿವನಲ್ಲದಿಲ್ಲ. ಶಿವನೇ ಕದವಿಕ್ಕಿದರೆ ನಾವೆಂತು ಜೀವಿಸುವೆವು? ಎಂದು ಗಣತಿಂತಿಣಿ ಶಿವಧೋ ಎಮ್ದು ಕೂಗಿಡುತ್ತಿರಲು ಮೆರೆಮಿಂಡರು ಅದೇನೆಂದು ಕೇಳುವರು ನಂಬಿಯೊಡನೆ ಶಿವ ಹೋಗಲು ದೇವಾಲಯದ ಬಾಗಿಲು ಮುಚ್ಚಿತು. ಹಸು ಹುಲ್ಲುನೊಲ್ಲದೆವೆ. ಶಿಶು ಬೆಣ್ಣೆದಿನ್ನದಿವೆ ಪುರಜನ ಪ್ರಾಣನೀಗುತ್ತಿರುವರು ಎಂದು ಭಕ್ತರು ಹೇಳುವರು.

ಮೆರೆಮಿಂಡ ಶಿವನಿಗೆ ಹಾಗುವ ಬಹಿಷ್ಕಾರ "ಶಿವಭಕ್ತರಂ ಮೀರಿದವನೊಡನೆ ಹೋದನೆ ಶಿವಭಕ್ತರಂ ನೋಡದವನೊಡನೆ ಹೋದನೇ ಮತ್ತೆ ಹೊಯಿ ಡಂಗುರವನಿನ್ನೊಮ್ಮ ಯೀಶಂಗೆ ಮೊತ್ತದ ಗಣಾವಳಿಯನೊಲ್ಲದ ಮಹೇಶಂಗೆ" ಎಂದು ಸರ್ವೇಶನಿಗೂ ಬಹಿಷ್ಕಾರ ಹಾಕುವರು.

ಶಿವನ ಗೋಳಾಟ "ಎನ್ನನೊಳಗಾಗಿ ಹೊಱಗೆಂದರಿನ್ನೆಗುವೆಂ, ಇನ್ನೆಂತು

ಭಕ್ತರ ನಿರೋಧಮಂ ನಿರೋಧಮಂ, ಭಕ್ತರೊಲ್ಲದರೆನ್ನನಜುವರರೆಲೆ ನಂಬಿ, ಭಕ್ತರೀಯದಡೆ ಎನಗೀವರಾರೆಲೆ ನಂಬಿ, ಭಕ್ತರಂ ನೋಡದಡೆ ನೋಳ್ಪಾರಾರೆಲೆ ನಂಬಿ'' ಶಿವನು ನಂಬಿಯ ಸಿತ್ಥಿಯನ್ನು ನೋಡಿ ಮರಗಿ ಅವನನ್ನು ಸಮಾಧಾನಿಸಿ ಭಕ್ತರನ್ನು ಹಾಡಿ ಹೊಗಳುವಂತೆ, ಬೇಡುವಂತೆ, ನೋಡುವಂತೆ ಸಲಹೆ ಕೊಡುವನು.

**ಸಮರೋಪ**

ಕರ್ನಾಟಕದಲ್ಲಿ ಶಿವನ ಆರಾಧನೆಯು ಬಹಳ ಪ್ರಾಚೀನಕಾಲದಿಂದಲೂ ಆಚರಿಸುತ್ತಲೇ ಬಂದಿದ್ದಾರೆ. ದ್ರಾವಿಡರು ಶಿವನನ್ನು ಪ್ರಾಚೀನಕಾಲದಿಂದಲೂ ಆರಾಧಿಸುತ್ತಲೇ ಬಂದಿದ್ದಾರೆಂಬುದು ವಿದ್ವಾಂಸರ ವಾದ. ಬ್ರಾಹ್ಮಣರು ವಿಷ್ಣು ದೇವರನ್ನು ಆರಾಧಿಸುತ್ತಾ ಬಂದರೆ ಆರ್ಯದ್ರಾವಿಡರು ಶಿವನನ್ನು, ಕೆಳವರ್ಗದ ಜನರು ಆರಾಧನಾ ಮೂರ್ತಿಯಾಗಿ ಲಿಂಗರೂಪದಲ್ಲಿ ಪೂಜಿಸುತ್ತಿದ್ದರು. ಶಿವನ ಆರಾಧಕರು ಲಿಂಗವನ್ನು ಬಿಳಿಯ ವಸ್ತ್ರದಲ್ಲಿ ಇಟ್ಟು ತಮ್ಮ ಕತ್ತಿನ ಭಾಗದಲ್ಲಿ ಕಟ್ಟಿಕೊಳ್ಳುತ್ತಾ ಇದ್ದರೂ.ಬೆಳಗಿನ ಪೂಜೆ ವಿಧಿವಿಧಾನಗಳನ್ನು ಪೂರೈಸಿ ನಂತರ ಮುಂದಿನ ತಮ್ಮ ಕಾಯಕಗಳನ್ನು ಅವರುಗಳು ಮಾಡುತ್ತಿದ್ದರೂ ಭಕ್ತಿಯೇ ಮುಖ್ಯವಾಗಿತ್ತು.

**ಪರಾಮರ್ಶನ ಗ್ರಂಥಗಳು**


1. ತಾಳ್ತಜೆ ವಸಂತಕುಮಾರ, 1980, ಹರಿಹರನ ರಗಳೆಗಳು, ಕನ್ನಡ ಸಂಘ, ಹಂಪಿ.
2. ಎಂ.ಎಂ.ಕಲಬುರ್ಗಿ, 1999, ಹರಿಹರನ ರಗಳೆಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
3. ಡಾ.ಸಿದ್ಧಲಿಂಗಯ್ಯ(ಪ್ರಧಾನ ಸಂಪಾದಕರು),ಎಂ.ಎಂ.ಕಲಬುರ್ಗಿ(ಗೌರವ ಸಂಪಾದಕರು), 2012, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ಡಾ. ಸಂಗಮೇಶ ಸವದತ್ತಿಮಠ, ವರ್ಣನಾತ್ಮಕ ವಚನ ಪದಕೋಶ,
5. ಡಾ.ಕೆ.ಪಿ.ಮಹಾದೇವಯ್ಯ, 1999, ಹರಿಹರನ ರಗಳೆಗಳ ಸಾಹಿತ್ಯಿಕ ಅಧ್ಯಯನ, ಅಭಿರುಚಿ ಪ್ರಕಾಶನ, ನಂ 386,14ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು.
6. ಡಾ.ಎಸ್.ವಿದ್ಯಾಶಂಕರ, 2013, ವೀರಶೈವ ಸಾಹಿತ್ಯ ಚರಿತ್ರೆ–ಸಂಪುಟ ಎರಡು(ಹರಿಹರ ಯುಗ), ಪ್ರಿಯದರ್ಶಿನಿ ಪ್ರಕಾಶನ, ನಂ 138, 7ನೇ 'ಸಿ' ಮುಖ್ಯರಸ್ತೆ, ಹಂಪಿ ನಗರ, ಬೆಂಗಳೂರು.
7. ಡಾ.ಶಿವಾನಂದ ಎಸ್.ವಿರಕ್ತಮಠ,2014, ಹರಿಹರನ ರಗಳೆಗಳು: ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.